14-10-2014

## ...ಲ್ಪಸಂಖ್ಯಾತರ ಆಯೋಗದಿಂದ ಸರ್ಕಾರಕ್ಕೆ 2–3 ತಿಂಗಳಲ್ಲಿ ವರದಿ

...ಗುಲಬರ್ಗಾ,ಅ.13–
...ಟಕ ರಾಜ್ಯ ಅಲ್ಪಸಂಖ್ಯಾ
...ಯೋಗವು ಅಲ್ಪಸಂ
...ರ ಶಿಕ್ಷಣ ಮತ್ತಿತರ ಕ್ಷೇ
...ಲ್ಲಿ ಆಗಿರುವ ಲೋಪ
...ಷಗಳ ಬಗ್ಗೆ ಸಮೀಕ್ಷೆ
... ವಿಚಾರಣೆ ನಡೆಸಿ
... 2–3 ತಿಂಗಳಲ್ಲಿ ಸ
...ಕ್ಕೆ ವರದಿ ಸಲ್ಲಿಸಲಿದೆ.
...ರ್ಯಕ್ಕೆ ಅಲ್ಪಸಂಖ್ಯಾತ
...ಗೂ ಸಂಘ ಸಂಸ್ಥೆಗ
...ಹಕರಿಸಬೇಕೆಂದು ಆ
...ಗದ ಅಧ್ಯಕ್ಷ ಅನ್ವರ್
...ಣಿಪ್ಪಾಡಿ ಅವರು
...ರರು.

...ು ಗುರುವಾರ ಗುಲಬ
...ಲ್ಲಿ ಗುಲಬರ್ಗಾ ಜಿಲೆ
...ಅಲ್ಪಸಂಖ್ಯಾತರ ಕುಂ
...ರತೆಗಳ ಅಹವಾಲು
...ರ ಹಾಗೂ ವಿವಿಧ ಇ
...ಗಳು ಅಲ್ಪಸಂಖ್ಯಾತರಿ
...ಹಮ್ಮಿಕೊಂಡ ಯೋಜ
... ಪ್ರಗತಿ ಪರಿಶೀಲನಾ
... ಅಧ್ಯಕ್ಷತೆ ವಹಿಸಿ ಮಾತನಾಡಿ ಈ ಭಾಗದಲ್ಲಿ ಅಲ್ಪಸಂಖ್ಯಾತರ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧದ ಕ್ರಮದ ಬಗ್ಗೆ ವರದಿಯಲ್ಲಿ ತಿಳಿಸಲಾಗುವುದು ಎಂದರು.

ಸರ್ಕಾರ ಅಲ್ಪಸಂಖ್ಯಾತರಿಗಾಗಿ ಹಮ್ಮಿಕೊಂಡ ಎಲ್ಲ ಯೋಜನೆಗಳ ಬಗ್ಗೆ ಜನಜಾಗೃತಿ ಮೂಡಿಸುವುದು ಅತೀ ಮುಖ್ಯ. ಇದಕ್ಕಾಗಿ ಪ್ರತ್ಯೇಕ ಅನುದಾನ ಮೀಸಲಿಡಲಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಶಿಕ್ಷಣ ಅಭಿವೃದ್ಧಿಗಾಗಿ ವಿಶೇಷವಾಗಿ ಸರ್ವ ಶಿಕ್ಷಣ ಅಭಿಯಾನ ಮತ್ತು ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಗಳ ಅನುಷ್ಠಾನದಲ್ಲಿ ಕಂಡುಬಂದ ಹಲವಾರು ಲೋಪದೋಷಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅಧ್ಯಕ್ಷರು ಸರ್ಕಾರದ ಯೋಜನೆ ಮತ್ತು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳ ಬಗ್ಗೆ ಅಲ್ಪಸಂಖ್ಯಾತರಿಗೆ ಹಾಗೂ ಅಲ್ಪಸಂಖ್ಯಾತ ಸಂಘ ಸಂಸ್ಥೆಗಳಿಗೆ ಅಧಿಕಾರಿಗಳು ಮಾಹಿತಿ ನೀಡಬೇಕು ಎಂದರು.

ಸರ್ಕಾರಿ ಕಚೇರಿಗಳಿಗೆ ಆಗಮಿಸುವ ಅಲ್ಪಸಂಖ್ಯಾತ ಸಾರ್ವಜನಿಕರೊಂದಿಗೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸೌಜನ್ಯದಿಂದ ವರ್ತಿಸಬೇಕು. ಸಾರ್ವಜನಿಕ ಸಂಪರ್ಕ ಅತೀ ಮುಖ್ಯ. ಜಿಲ್ಲೆಯ ಶಿಕ್ಷಣ ಇಲಾಖೆ ಅಧಿಕಾರಿಗಳು ಸಾರ್ವಜನಿಕರು ಮತ್ತು ಅಲ್ಪಸಂಖ್ಯಾತ ಶಾಲಾ ಶಿಕ್ಷಣ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವಲ್ಲಿ ಬಹಳಷ್ಟು ನಿರ್ಲಕ್ಷ್ಯತನ ತೋರಿದ್ದು, ಇನ್ನು ಮುಂದೆ ಅಲ್ಪಸಂಖ್ಯಾತರರೊಂದಿಗೆ ಸೌಹಾರ್ದ ಸಂಪರ್ಕ ಸಮನ್ವಯತೆ ಸಾಧಿಸಲು ಹೆಚ್ಚು ಮುತುವರ್ಜಿ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಎಂ.ಎಸ್.ಡಿ.ಪಿ. ಇಂದಿರಾ ಆವಾಸ ಯೋಜನೆಯಡಿ ನಿರ್ಮಿಸಲಾದ ಮನೆಗಳಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಹಣ ನೀಡುವಲ್ಲಿ ವಿಳಂಬವಾಗುತ್ತಿರುವ ದೂರುಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತಂದರೆ 24 ಗಂಟೆಗಳಲ್ಲಿ ಹಣ ಪಾವತಿಸುವ ವ್ಯವಸ್ಥೆ ಮಾಡುವ ಭರವಸೆ ನೀಡಿದ್ದಾರೆ. ಆದರೆ ಮನೆ ನಿರ್ಮಾಣದ ಹಣವನ್ನು ಸರ್ಕಾರದ ನಿಯಮಾವಳಿ ಪ್ರಕಾರವೇ ನೀಡಲಾಗುತ್ತದೆ. ಸಿಮೆಂಟ್, ಮತ್ತಿತರ ಕಟ್ಟಡ ಸಾಮಗ್ರಿಗಳ ದರ ಹೆಚ್ಚಾಗಿರುವುದರಿಂದ ಪ್ರತಿ ಮನೆ ನಿರ್ಮಾಣದ ಅನುದಾನ ಹೆಚ್ಚಳ ಮಾಡುವ ಪ್ರಸ್ತಾವನೆಯನ್ನು ಆಯೋಗ ಸರ್ಕಾರಕ್ಕೆ ಸಲ್ಲಿಸುವುದು.

ಗುಲಬರ್ಗಾ ನಗರದ ನಯಾ ಮೋಹಲ್ಲಾ ವಾರ್ಡ್ ಸಂಖ್ಯೆ 10ರಲ್ಲಿರುವ ಹಾಗೂ

(4ನೇ ಪುಟ...)

## ಸರ್ಕಾರಕ್ಕೆ 2–3 ತಿಂಗಳಲ್ಲಿ ವರದಿ

(1ನೇ ಪುಟದಿಂದ)

ಶೇಖ್‌ರೋಜಾ ಬಡಾವಣೆಯಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಶುಕ್ರವಾರ ಖುದ್ದಾಗಿ ಭೇಟಿ ನೀಡಿ ಈ ಕೇಂದ್ರಗಳ ಕಾರ್ಯ ನಿರ್ವಹಣೆ ಮತ್ತು ಮಕ್ಕಳ ಸಂಖ್ಯೆಯ ಸವಿವರ ವರದಿಯನ್ನು ಆಯೋಗಕ್ಕೆ ಸಲ್ಲಿಸಬೇಕು. ಅದೇರೀತಿ ಸೇಡಂ ತಾಲೂಕಿನ ಲಿಂಗಂಪಲ್ಲಿ ಗ್ರಾಮದಲ್ಲಿ ಶಿಥಿಲಾವಸ್ಥೆಯಲ್ಲಿರುವ ಅಂಗನವಾಡಿ ಕೇಂದ್ರಕ್ಕೂ ಬುಧವಾರ ಭೇಟಿ ನೀಡಿ ಕಟ್ಟಡ ನಿರ್ಮಾಣ ಮಾಡುವ ಏಜೆನ್ಸಿ, ಕಟ್ಟಡದ ಸ್ಥಿತಿಗತಿಗಳ ಬಗ್ಗೆಯೂ ಆಯೋಗಕ್ಕೆ ವರದಿ ಸಲ್ಲಿಸಬೇಕೆಂದರು. ದೂರು ಸಲ್ಲಿಸಿದವರು ಉಪನಿರ್ದೇಶಕರ ಭೇಟಿ ಸಂದರ್ಭದಲ್ಲಿ ಹಾಜರಿರಬೇಕೆಂದರು. ಪ್ರತಿ ಅಂಗನವಾಡಿ ಕೇಂದ್ರದಲ್ಲಿ 2 ಕಿಶೋರಿ ಬಾಲಕಿಯರಿಗೆ ಪೌಷ್ಟಿಕ ಆಹಾರ ಸರ್ಕಾರ ಮಾರ್ಪಡಿಸಿ ಕೇವಲ ಬಿಪಿಎಲ್ ಕಾರ್ಡು ಮಾತ್ರ ಕಡ್ಡಾಯಗೊಳಿಸಿ ಆದೇಶ ಹೊರಡಿಸಿದ್ದನ್ನು 2–3 ದಿನಗಳಲ್ಲಿ ತಾಲೂಕು ಮತ್ತು ಅಂಗನವಾಡಿ ಮಟ್ಟದಲ್ಲಿ ಮಾಹಿತಿ ತಲುಪಿಸಬೇಕೆಂದು ಹೇಳಿದರು.

ನ್ಯಾಯಬೆಲೆ ಅಂಗಡಿಗಳನ್ನು ತಿಂಗಳಿಗೆ 2–3 ದಿನ ಮಾತ್ರ ತೆರೆಯುವವರ ಲೈಸೆನ್ಸ್‌ಗಳನ್ನು ನಿರ್ದಾಕ್ಷಿಣ್ಯವಾಗಿ ರದ್ದು ಪಡಿಸಬೇಕು. ಪ್ರತಿ ದಿನ 2 ಗಂಟೆ ನ್ಯಾಯಬೆಲೆ ತೆರೆದಿಡುವುದನ್ನು ಕಡ್ಡಾಯಗೊಳಿಸಬೇಕು. ನ್ಯಾಯಬೆಲೆ ತೆರೆದಿಡುವ ಅವಧಿಯನ್ನು ಕಡ್ಡಾಯವಾಗಿ ನಮೂದಿಸಬೇಕು. ಇದಕ್ಕೊಪ್ಪದವರ ಲೈಸೆನ್ಸ್‌ಗಳನ್ನು ಸಹ ರದ್ದುಪಡಿಸಬೇಕು ಎಂದರು.

ಆಯೋಗದ ಕಾರ್ಯದರ್ಶಿ ಅತೀಕ್ ಅಹ್ಮದ್, ಜಿಲ್ಲಾಧಿಕಾರಿ ಡಾ. ವಿಶಾಲ್ ಆರ್., ಜಿಲ್ಲಾ ಪೊಲೀಸ್ ಅಧೀಕ್ಷಕ ಪ್ರವೀಣ ಮಧುಕರ ಪವಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾ